2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 60/2017</u>

| | | |
|---|---|---|
| ಸಾಕ್ಷಿದಾರರ ಹೆಸರು | - ಗಂಗಾಧರಪ್ಪ | ಪಿಡಬ್ಲೂ - 20 |
| ತಂದೆಯ ಹೆಸರು | - ಕರೀಗೌಡ | ಸಿಡಬ್ಲೂ - 42 |
| ವಯಸ್ಸು | - 68 ವರ್ಷ | |
| ಉದ್ಯೋಗ | - ನಿವೃತ್ತ ಅಬಕಾರಿ ಉಪನಿರೀಕ್ಷಕರು | |
| ವಾಸ ಸ್ಥಳ | - ಹಾಸನ | |

ದಿನಾಂಕಃ **22.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ದಿಃ 01.01.2016 ರಿಂದ 31.12.2016 ರವರೆಗೆ ಕೆ.ಎಸ್.ಬಿ.ಸಿ.ಎಲ್ ಡಿಪೋ ನಂ.2 ಹೆಚ್.ಎನ್. ಪುರ ರಸ್ತೆ ಇಲ್ಲಿ ಅಬಕಾರಿ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 29.03.2016 ರಂದು ಪೋಲೀಸ್ ವೃತ್ತ ನಿರೀಕ್ಷಕರು, ಕಡೂರು ಇವರು ಪತ್ರ ಬರೆದು ಸದರಿ ಪತ್ರದಲ್ಲಿ ನಮೂದಿಸಿದ ರಾಜಾ ವಿಸ್ಕಿ 90 ಎಂ.ಎಲ್.ನ ಟೆಟ್ರ ಪ್ಯಾಕೆಟುಗಳನ್ನು ಯಾವ ಅಂಗಡಿಗೆ ಸರಬರಾಜು ಆಗಿದೆ ಎಂಬ ಮಾಹಿತಿ ಕೇಳಿದ್ದರು. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.31 ಎಂದು ಸಾಕ್ಷಿಯ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು.

3. ನಾನು ಸದರಿ ಪತ್ರವನ್ನು ಪರಿಶೀಲಿಸಿ ಎಂ.ಎಸ್.ಐ.ಎಲ್.ಲೈಸೆನ್ಸ್ ನಂ.7198 ನ ಅರಸಿಕೆರೆ ಅಂಗಡಿಗೆ ಇವರಿಗೆ ಹಾಗೂ ಇನವಾಯ್ಸ್ ನಂ.00008363 ದಿಃ02.02.2016 ರಂದು ವಿತರಣೆ ಮಾಡಲಾಗಿದೆ ಎಂದು ತಿಳಿಸಿರುತ್ತೇನೆ. ಈ ಬಗ್ಗೆ ನಾನು ನೀಡಿದ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.32 ಎಂದು ಸಾಕ್ಷಿಯ ಸಹಿಯನ್ನು ನಿಪಿ.32(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲು: ಶ್ರೀ.ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿತರ ಪರವಾಗಿ</u>

4. ನಾವು ಸನದುದಾರರಿಗೆ ಸರಬರಾಜು ಮಾಡಿದ ಮದ್ಯದ ಪ್ಯಾಕೆಟುಗಳನ್ನು ಅವರು ಯಾವುದೇ ಗ್ರಾಹಕರಿಗೆ ಮಾರಾಟ ಮಾಡಬಹುದಾಗಿದೆ. ಕೆ.ಎಸ್.ಡಿ.ಸಿ.ಎಲ್. ಡಿಪೋದಿಂದ ಮದ್ಯದ ಬಾಕ್ಸಗಳನ್ನು ಎಂ.ಎಸ್.ಐ.ಎಲ್. ಅಂಗಡಿಗಳಿಗೆ ಸರಬರಾಜು ಮಾಡಲಾಗುತ್ತದೆ. ಎಂ.ಎಸ್.ಐ.ಎಲ್. ನವರಿಗೆ ಮದ್ಯವನ್ನು ಚಿಲ್ಲರೆ ಮಾರಾಟ ಮಾಡಲು ಅವಕಾಶ ಇದೆ. ಎಂ.ಎಸ್.ಐ.ಎಲ್. ನವರು ಬಾಕ್ಸ ಗಟ್ಟಲೆ ಮದ್ಯವನ್ನು ಅನುಮತಿ ಮೇರೆಗೆ ಮಾರಾಟ ಮಾಡುವುದಿಲ್ಲ. ಅನುಮತಿ ಪಡೆದು ಹೆಚ್ಚು ಮದ್ಯ ಖರೀದಿಸಬಾರದು ಎಂದು ಯಾವುದೇ ನಿಬಂದನೆ ಇಲ್ಲ.

5. ನಾನು ಸದರಿ ಪತ್ರವನ್ನು ಪರಿಶೀಲಿಸಿ ಎಂ.ಎಸ್.ಐ.ಎಲ್.ಲೈಸೆನ್ಸ ನಂ.7198 ನ ಅರಸಿಕೆರೆ ಅಂಗಡಿಗೆ ಇವರಿಗೆ ಹಾಗೂ ಇನವಾಯ್ಸ ನಂ.00008363 ದಿಃ02.02.2016 ರಂದು ವಿತರಣೆ ಮಾಡಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಅರಸೀಕೆರೆ 2016 ನೇ ಸಾಲಿನಲ್ಲಿ ಎರಡು ಎಂ.ಎಸ್.ಐ.ಎಲ್. ಅಂಗಡಿಗಳು ಇದ್ದವು. ಎಂ.ಎಸ್.ಐ.ಎಲ್. ನ ಲೈಸೆನ್ಸ ನಂ.7198 ರ ದಾಖಲೆ ಪೋಲಿಸರಿಗೆ ಕೊಟ್ಟಿಲ್ಲ. ಎಂ.ಎಸ್.ಐ.ಎಲ್. ಲೈಸೆನ್ಸ ನಂ.7198 ರ ಶಾಪಿನ ಮಾಲೀಕರ ಯಾರು ಎಂದು ಗೊತ್ತಿಲ್ಲ. ನಾನು ಪರಿಶೀಲಿಸಿದ ಟೆಟ್ರ ಪ್ಯಾಕೆಟ್ಟಿನ ಮದ್ಯವನ್ನು ಯಾರು ಖರೀದಿಸಿ ಒಯ್ದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ. ನಾನು ಪರಿಶೀಲಿಸಿದ ಟೆಟ್ರ ಪ್ಯಾಕೆಟು ಅರಸೀಕೆರೆಗೆ

ಸರಬರಾಜು ಮಾಡಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ